# ಶ್ರೀ ಸುತ್ತೂರು ಮಠ

## ಚಾಮುಂಡಿಬೆಟ್ಟದ ತಪ್ಪಲು, ಮೈಸೂರು

# ಗುರುಪೂರ್ಣಿಮಾ ಹಾಗೂ ಬೆಳದಿಂಗಳ ಸಂಗೀತ 244

**13 ಜುಲೈ 2022 * ಬುಧವಾರ * ಸಂಜೆ 5.30**

ದಿವ್ಯ ಸಾನ್ನಿಧ್ಯ

**ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು**

ಜಗದ್ಗುರು ಶ್ರೀ ವೀರಸಿಂಹಾಸನ ಮಹಾಸಂಸ್ಥಾನ ಮಠ, ಸುತ್ತೂರು ಶ್ರೀಕ್ಷೇತ್ರ



ಉಪನ್ಯಾಸ

ಡಾ. ಕಬ್ಬಿನಾಲೆ ವಸಂತ ಭಾರದ್ವಾಜ್



ಗಾಯನ

ವಿದ್ವಾನ್ ಗಾನಪ್ರವೀಣ ಯೋಗೀಶ ಶರ್ಮ ಬಳ್ಳಪದವು



ವಯೊಲಿನ್

ವಿದ್ವಾನ್ ಕೇಶವ ಮೋಹನ್‌ಕುಮಾರ್



ಮೃದಂಗ

ವಿದ್ವಾನ್ ಎಚ್.ಎಲ್. ಶಿವಶಂಕರಸ್ವಾಮಿ

**ಸರ್ವರಿಗೂ ಹಾರ್ದಿಕ ಸುಸ್ವಾಗತ**

**ಡಾ. ಕಬ್ಬಿನಾಲೆ ವಸಂತ ಭಾರದ್ವಾಜರು** ಖ್ಯಾತ ಸಾಹಿತಿಗಳು, ಸಂಶೋಧಕರು. ಸ್ಟೇಟ್ ಬ್ಯಾಂಕ್ ಆಫ್ ಮೈಸೂರಿನ ಸಿಬ್ಬಂದಿ ತರಬೇತಿ ಕಾಲೇಜಿನಲ್ಲಿ ಹಿರಿಯ ವ್ಯವಸ್ಥಾಪಕರಾಗಿದ್ದರು. ಸಾಹಿತ್ಯ ಮತ್ತು ಯಕ್ಷಗಾನ ಅವರ ಆಸಕ್ತಿಯ ಕ್ಷೇತ್ರಗಳು. ಮೂರು ಮಹಾಕಾವ್ಯಗಳು ಸೇರಿದಂತೆ 150 ಕೃತಿಗಳ ರಚನೆ. ಪಾರ್ತಿ ಸುಬ್ಬ ಪ್ರಶಸ್ತಿ, ಕನಕ ಗೌರವ ಪ್ರಶಸ್ತಿ, ವಿಶ್ವಮಾನವ ಪ್ರಶಸ್ತಿ ಮುಂತಾದ ಹಲವಾರು ಪ್ರತಿಷ್ಠಿತ ಪುರಸ್ಕಾರಗಳಿಗೆ ಭಾಜನರು. ಮುಂಬಯಿಯ ಅಖಿಲ ಭಾರತ ಯಕ್ಷಗಾನ ಸಮ್ಮೇಳನದ ಅಧ್ಯಕ್ಷತೆ, ವಿಜಯಪುರದ ಗಮಕಕಲಾ ಸಮ್ಮೇಳನದ ಅಧ್ಯಕ್ಷತೆ, ತುಳು ಭಾಷೆಯೂ ಸೇರಿದಂತೆ ಹಲವಾರು ಅಕ್ಯಾಡೆಮಿಗಳ, ಪ್ರಾಧಿಕಾರಗಳ ಸದಸ್ಯರು. 'ವಿದ್ಯೆಗೆ ತಕ್ಕ ವಿನಯ' ಎಂಬ ಮಾತಿಗೆ ಸಾಕಾರವಾಗಿದ್ದಾರೆ. ಖ್ಯಾತ ವಾಗ್ಮಿಗಳು, ಸಮತೋಲನದ ಚಿಂತಕರು.

**ವಿದ್ವಾನ್ ಗಾನಪ್ರವೀಣ ಯೋಗೀಶ ಶರ್ಮ ಬಳ್ಳಪದವುರವರು** ಕಾಸರಗೋಡು ಜಿಲ್ಲೆಯ ಬಳ್ಳಪದವು ಗ್ರಾಮದವರು. ವಿದ್ವಾನ್ ಮಾಧವ ಉಪಾಧ್ಯಾಯ ಮತ್ತು ವಿದ್ವಾನ್ ವೆಲ್ಲಿಕ್ಕೋತ್ ವಿಷ್ಣುಭಟ್ಟರ ಬಳಿ ಪ್ರಾರಂಭಿಕ ಸಂಗೀತ ಶಿಕ್ಷಣ. ತಿರುವನಂತಪುರದ ಸ್ವಾತಿ ತಿರುನಾಳ್ ಸಂಗೀತ ಮಹಾವಿದ್ಯಾಲಯದಿಂದ "ಗಾನ ಪ್ರವೀಣ" ಪದವಿಯಲ್ಲಿ ಪ್ರಥಮ ರ್‍ಯಾಂಕಿನೊಂದಿಗೆ ಉತ್ತೀರ್ಣ. ಪ್ರೊ. ಮಾವೆಲಿಕ್ಕರ ವೇಲುಕುಟ್ಟಿ ನಾಯರರ ಬಳಿ ಮೃದಂಗ, ಪ್ರೊ. ಕೆ.ವೆಂಕಟರಮಣನ್‌ರವರ ಬಳಿ ಕರ್ನಾಟಕ ಸಂಗೀತ ಅಭ್ಯಾಸ.

ಕುವೈತ್‌ನ ಕರ್ನಾಟಕ್ ಮ್ಯೂಸಿಕ್ ಫೋರಂ, ಚೆನ್ನೈನ ಕಲ್ಪಕ್ಕಂ ಸಂಗೀತ ಸಭಾ, ಮುಂಬಯಿಯ ನಾದೋಪಾಸನ ಸಂಗೀತ ಸಭೆ, ವಾಣಿ ಫೈನ್ ಆರ್ಟ್ಸ್, ಭಿಲಾಯಿಯ ಅಯ್ಯಪ್ಪಸ್ವಾಮಿ ದೇವಸ್ಥಾನ, ಬೇಲೂರು ಚನ್ನಕೇಶವ ದೇವಸ್ಥಾನ, ಪುಟ್ಟಪರ್ತಿಯ ಪ್ರಶಾಂತಿ ನಿಲಯಂ, ಒಡಿಶಾ ಮತ್ತು ಪಶ್ಚಿಮ ಬಂಗಾಳದ ಪ್ರತಿಷ್ಠಿತ ವೇದಿಕೆಗಳಲ್ಲಿ ಕಾರ್ಯಕ್ರಮ ನೀಡಿ ವಿದ್ವಜ್ಜನರು ಮತ್ತು ರಸಿಕರಿಂದ ಪ್ರಶಂಸೆ. ಸಂಗೀತ ಪಾಠಮಾಲಿಕಾ, ಮೃದಂಗ ಮಾರ್ಗದರ್ಶಿಕಾ ಕೃತಿಗಳ ಕರ್ತೃ. ಪುರಂದರದಾಸರ ಕೃತಿಗಳನ್ನಾಧರಿಸಿ ಎರಡು

ಸಂಪುಟಗಳ ಆಲ್ಬಂ, ಭಾವಗೀತೆ/ಭಕ್ತಿಗೀತೆಗಳ ಸಿಡಿಗಳನ್ನು ಹೊರತಂದಿದ್ದಾರೆ. ಕಥಕ್ಕಳಿ–ಕರ್ನಾಟಕ ಸಂಗೀತ ಜುಗಲಬಂದಿ, 12 ಗಂಟೆಗಳ ಅಖಂಡ ಗಾಯನ ಮತ್ತು ಸಂಗೀತ ಚಿಕಿತ್ಸೆ – ಇವು ಇವರ ಇನ್ನಿತರ ವೈಶಿಷ್ಟ್ಯಗಳು. ಅವರ ಗ್ರಾಮದಲ್ಲಿ ವೀಣಾವಾದಿನಿ ಸಂಗೀತ ವಿದ್ಯಾಪೀಠಂ ಮತ್ತು ವೈದಿಕ್–ತಾಂತ್ರಿಕ್ ವಿದ್ಯಾಪೀಠಂ ಎಂಬ ಸಂಸ್ಥೆಗಳನ್ನು ನಡೆಸುತ್ತಿದ್ದಾರೆ. ಈ ಸಂಸ್ಥೆಯು ಆನ್‌ಲೈನ್/ಆಫ್‌ಲೈನ್ ಸಂಗೀತ ಶಿಕ್ಷಣ ನೀಡುವುದಲ್ಲದೆ, ಖ್ಯಾತ ಸಂಗೀತಗಾರರ ಕಚೇರಿಗಳನ್ನೂ ಏರ್ಪಡಿಸುತ್ತದೆ.

ಶ್ರೀ ಯೋಗೀಶ್ ಶರ್ಮರವರ ಸಾಧನೆಗಾಗಿ ಅವರಿಗೆ ರಂಗಚೆನ್ನಾರಿ ಪ್ರಶಸ್ತಿ, ಕಲಕ ಪ್ರಶಸ್ತಿ, ಕೇರಳ ಸಂಗೀತ ನಾಟಕ ಅಕ್ಯಾಡೆಮಿ ಪ್ರಶಸ್ತಿ, ಉಬ್ರಂಗಳ ಶ್ರೀ ಮಹಾದೇವ ದೇವಸ್ಥಾನದ ಪ್ರತಿಭಾ ಪುರಸ್ಕಾರ ಪ್ರಶಸ್ತಿ ಮತ್ತು ಶ್ರೀ ಕಂಚಿ ಕಾಮಕೋಟಿ ಪೀಠದ ಆಸ್ಥಾನ ವಿದ್ವಾನ್ ಪ್ರಶಸ್ತಿ ಲಭಿಸಿವೆ.

**ವಿದ್ವಾನ್ ಕೇಶವ್ ಮೋಹನ್‌ಕುಮಾರ್‌ರವರು** ವಿದ್ವಾನ್ ಎಚ್.ಕೆ. ನರಸಿಂಹಮೂರ್ತಿಯವರ ಶಿಷ್ಯರು. ಆಕಾಶವಾಣಿ ಹಾಗೂ ದೂರದರ್ಶನದಲ್ಲಿ ವಯೊಲಿನ್ ವಾದನದಲ್ಲಿ ಬಿ.ಹೈ ಶ್ರೇಣಿ ಕಲಾವಿದರು. ಪ್ರಧಾನ ಕಲಾವಿದರಾಗಿ ಹಾಗೂ ಸಾಥೀದಾರರಾಗಿ ಹಲವಾರು ಪ್ರತಿಷ್ಠಿತ ಸಂಗೀತಸಭೆಗಳಲ್ಲಿ ಕಾರ್ಯಕ್ರಮ ನೀಡಿದ್ದಾರೆ.

**ವಿದ್ವಾನ್ ಎಚ್.ಎಲ್. ಶಿವಶಂಕರಸ್ವಾಮಿಯವರು** ಸಂಗೀತ ಕ್ಷೇತ್ರದ ದಿಗ್ಗಜರಿಗೆ ಸಾಥ್ ನೀಡಿರುವರು. ಜುಗಲ್‌ಬಂದಿ ಕಾರ್ಯಕ್ರಮಗಳನ್ನೂ ನೀಡಿದ್ದಾರೆ. ಕರ್ನಾಟಕ ಗಾನಕಲಾ ಪರಿಷತ್ತಿನಿಂದ "ಉತ್ತಮ ಮೃದಂಗ ಕಲಾವಿದರು" ಎಂದು ಪುರಸ್ಕೃತರಾಗಿರುವ ಇವರು ಏಳು ಮೃದಂಗಗಳ ಮೂಲಕ ರಾಗಸಂಚಾರಗಳನ್ನು ತೋರಿಸುವ ಅಪರೂಪದ ಕೌಶಲ ಉಳ್ಳವರು. ಮೈಸೂರಿನ "ಲಯ ವಿದ್ಯಾ ಪ್ರತಿಷ್ಠಾನ" ಸಂಸ್ಥೆಯ ಸ್ಥಾಪಕರು. ಇವರ ಪ್ರಸ್ತುತಪಡಿಸುವ "ಲಯ ಲಹರಿ" ಫ್ಯೂಷನ್ ಕಾರ್ಯಕ್ರಮ ತುಂಬ ಜನಪ್ರಿಯವಾಗಿದೆ.

# ಬೆಳದಿಂಗಳ ಸಂಗೀತ 245

**11 ಆಗಸ್ಟ್ 2022**



**ಗಾಯನ**

**ವಿದುಷಿ ಶ್ರುತಿ ಎಸ್. ಭಟ್**



**ವಯೊಲಿನ್**

**ವಿದುಷಿ ಪೃಥ್ವೀ ಭಾಸ್ಕರ**



**ಮೃದಂಗ**

**ವಿದ್ವಾನ್ ಕೆ.ವಿ. ರವಿಶಂಕರ ಶರ್ಮ**



**ಘಟಂ**

**ವಿದ್ವಾನ್ ಎಸ್. ಮಂಜುನಾಥ್**

---

**ಫೋನ್: 0821–2548221, 2548223 * ಇಮೇಲ್: sutturmath@jssonline.org**